## <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No : 717/2022**

CW : 1 PW : 2

| | | |
|---|---|---|
| ಹೆಸರು | : | ಪ್ರಕಾಶ |
| ತಂದೆಯ ಹೆಸರು | : | ಬಸವಂತ್ರಾಯ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಒಕ್ಕಲುತನ |
| ಸ್ಥಳ | : | ದೇವನತೆಗನೂರು |

**(ದಿನಾಂಕ: 10-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>

ಆರೋಪಿತನನ್ನು ನೋಡಿರುತ್ತೇನೆ. ಚಾಸಾ-2 ರಿಂದ 6, 9 ಮತ್ತು 10 ರವರ ಪರಿಚಯ ಇರುತ್ತದೆ. ಚಾಸಾ-7, 8, 11 ರವರ ಪರಿಚಯ ಇರುವುದಿಲ್ಲ. ಮೃತ ಶಾರದಾಬಾಯಿ ನನ್ನ ತಾಯಿ ಆಗಬೇಕು. ಊರ ಹತ್ತಿರ ಇರುವ ನಮ್ಮ ಹೊಲಕ್ಕೆ ದಿನಾಲೂ ಮಧ್ಯಾಹ್ನ ನನ್ನ ತಾಯಿ ಹೊಲಕ್ಕೆ ಹೋಗುತ್ತಿದ್ದಳು. ಹೊಲದ ಬಂದಾರಿ ದಾಟಿ ಬಲಕ್ಕೆ ಬರುವಾಗ ಕಲಬುರಗಿಯಿಂದ ಶಹಾಬಾದ ಗೆ ಬರುವ ಟ್ಯೂ ವೀಲರ್ ಸೈಕಲ್ ಅತೀ ವೇಗದಿಂದ ಬಂದು ನಮ್ಮ ತಾಯಿಯನ್ನು ಎದುರಿಗೆ ಗುದ್ದಿಬಿಟ್ಟು ಶಹಾಬಾದ ಕಡೆಗೆ ಹೋಗಿರುತ್ತಾನೆ. ಅದರ ನಂಬರ ಕೆ.ಎ-32, ಹೆಚ್.ಎ-5032 ಅಂತ ಇರುತ್ತೆ. ನಂತರ ನನ್ನ ತಾಯಿಯನ್ನು ಅಂಬುಲೆನ್ಸನಲ್ಲಿ ಗುಲಬರ್ಗ ಸರ್ಕಾರಿ ಆಸ್ಪತ್ರೆಗೆ ನಂತರ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ದಿ: 29/11/2021 ರಂದು ಸಂಜೆ 6 ಗಂಟೆಗೆ ಅಪಘಾತ ಆಗಿರುತ್ತದೆ. ದಿ: 30/11/2021 ರಂದು ರಾತ್ರಿ 2.45 ಗಂಟೆ ಸುಮಾರಿಗೆ ಉಪಚಾರ ಫಲಿಸದೇ ಮೃತ ಹೊಂದಿರುತ್ತಾಳೆ. ಅದೇ ದಿನ ನಾನು ಫಿರ್ಯಾದಿ ಸಲ್ಲಿಸಿರುತ್ತೇನೆ. ಪಂಚನಾಮೆಯನ್ನು ದಿನಾಂಕ 30/11/2021 ನೇ ತಾರೀಕಿನಂದು ಮಾಡಿರುತ್ತಾರೆ. ಜಾಗೆಯನ್ನು ನಾನೇ ತೋರಿಸಿರುತ್ತೇನೆ. ಚಾಸಾ-9 ಮತ್ತು 10 ರವರು ನನ್ನ ತಾಯಿಯನ್ನು ಅಂಬುಲೆನ್ಸನಲ್ಲಿ ಕರೆದುಕೊಂಡು ಬಂದಿರುತ್ತಾರೆ. ನನ್ನ ತಾಯಿ ಸಾಯಂಕಾಲ 6 ಗಂಟೆ ಆದರೂ ಮನೆಗೆ ಬರದೇ ಇರುವ ಕಾರಣ ನಾನು, ಚಾಸಾ-9 ಮತ್ತು 10 ರವರು ಹುಡುಕಲು ರಸ್ತೆ ಕಡೆಗೆ ಹೋಗಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ವಾಹನವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ವಾಹನದ ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಪಂಚನಾಮೆಯ ಜಾಗೆಯ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದೆ. ನನ್ನ ತಾಯಿಯ ತಲೆಯ ಹಿಂಭಾಗಕ್ಕೆ ಪೆಟ್ಟಾಗಿತ್ತು, ಎರಡೂ ಕೈಗಳ, ಎಡಹಣೆಗೆ ಹಾಗೂ ಎಡಕಣ್ಣಿಗೆ ರಕ್ತಗಾಯ ಆಗಿದ್ದು ಹಾಗೂ ಬಲತೊಡೆಗೆ ರಕ್ತಗಾಯವಾಗಿರುತ್ತದೆ. ಅಪಘಾತವು ಮೋಟರ ಸೈಕಲ ಚಾಲಕ ಅನಿಲಕುಮಾರ ಇತನ ತಪ್ಪಿನಿಂದ ಆಗಿರುತ್ತದೆ. ಆರೋಪಿತನನ್ನು ಪೋಲೀಸ್ ಠಾಣೆಯಲ್ಲಿ ನಾನು, ಚಾಸಾ-9 ಮತ್ತು 10 ರವರು ನೋಡಿ ಗುರುತಿರುತ್ತೇವೆ. ಆತನ ಪೂರ್ಣ ಹೆಸರು ಅನಿಲ್ ತಂದೆ ರಾಮು ಚೌಹಾಣ್. ನಾನು ಈ ರೀತಿ ಹೇಳಿಕೆ ನೀಡಿರುತ್ತೇನೆ. ದಿ: 11/12/2021 ರಂದು ಪೋಲೀಸರಿಗೆ ಪುನ: ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ತಾವು ನೀಡಿದ ಪಿರ್ಯಾದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5

ಎಂದು, ಸಾಕ್ಷಿಯ ಸಹಿಯನ್ನು ನಿಪಿ-6 (ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಎಸ್.ಪಿ. ವಕೀಲರಿಂದ

ನಾನು ಹತ್ತನೇ ತರಗತಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರೆಯಲು ಬರುತ್ತದೆ. ಚಾಸಾ-2 ನಂದೂರಿನ ನಿವಾಸಿ. ಚಾಸಾ-3 ಮತ್ತು 4 ಗುಲಬರ್ಗ ನಿವಾಸಿಗಳು ಎಂದರೆ ಸರಿ. ಚಾಸಾ-5, 6, 9 ಮತ್ತು 10 ನಮ್ಮೂರಿನ ನಿವಾಸಿಗಳು ಎಂದರೆ ಸರಿ. ಮಧ್ಯಾಹ್ನ ನನ್ನ ತಾಯಿ ಹೊಲಕ್ಕೆ ಹೋದಾಗ ನಾನು ಮನೆಯಲ್ಲಿ ಇದ್ದೆ ಎಂದರೆ ಸರಿ. ಚಾಸಾ-9 ಮತ್ತು 10 ರವರನ್ನು ನನ್ನ ತಾಯಿಯನ್ನು ನೋಡಲು ನಾನೇ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಅವರನ್ನು ಈ ದಿನ ಸಾಕ್ಷಿದಾರರು ಅಂತ ನಾನು ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿ. ನನ್ನ ಫಿರ್ಯಾದಿಯಲ್ಲಿ ಚಾಸಾ-6, 9 ಮತ್ತು 10 ರವರನ್ನು ಕರೆಯಿಸಿ ಅಂಬುಲೆನ್ಸನಲ್ಲಿ ಕಳುಹಿಸಿರುವುದಾಗಿ ಬರೆಸಿರುವುದಿಲ್ಲ ಎಂದರೆ ಸರಿ. ನನ್ನ ಫಿರ್ಯಾದಿಯಲ್ಲಿ ಬಂದಾರಿನ ಸರ್ವೆ ನಂಬರ ಬರೆಸಿರುವುದಿಲ್ಲ ಅಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಅಂದರೆ ಸಾಕ್ಷಿಯು ನೋಡಿರುವುದಾಗಿ ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಚಾಸಾ-9 ಮತ್ತು 10 ರವರು ನಮ್ಮ ತಾಯಿಯನ್ನು ಹುಡುಕಲು ಹೋಗುತ್ತಿರುವಾಗ ಅಪಘಾತವನ್ನು ಕಣ್ಣಾರೆ ನೋಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನಮ್ಮ ತಾಯಿಯನ್ನು ಅಂಬುಲೆನ್ಸನಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮಧ್ಯರಾತ್ರಿ ಮೃತಪಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ಘಟನೆಯ ಕುರಿತು ಹೇಳಿಕೆಗಳನ್ನು ನೀಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ಕಾಣಿಸಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಆಗಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ಮತ್ತು 4 ರಲ್ಲಿ ಇರುವ ವಾಹನದಿಂದ ಅಪಘಾತ ಆಗಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಛಾಯಾಚಿತ್ರ ತೆಗೆಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ಖೊಟ್ಟಿ ಫಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುಲಬರ್ಗ ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿ. ಅದಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

**Sd/-**